**ದಿನಾಂಕ:17-12-2021 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ. ಜಿ.ಎ.ಎನ್.ವಕೀಲರಿಂದ:**

ಈ ದಿನ ನಾನು ನ್ಯಾಯಾಲಯಕ್ಕೆ 1 ನೇ ಪ್ರತಿವಾದಿಯ ಜೊತೆ ಬಂದಿದ್ದೇನೆ ಎಂದರೆ ಸರಿ ಅಲ್ಲ. ಈ ದಿನ ದಾವೆ ಇದೆ ಎಂದು ವಕೀಲರು ಹೇಳಿದ್ದಾರೆ.3 ಮತ್ತು 4 ನೇ ಪ್ರತಿವಾದಿಯರು ಯಾವ ಊರಿನಲ್ಲಿ ವಾಸ ಇದ್ದಾರೆ ಎಂದು ಗೊತ್ತಿಲ್ಲ. ನಾನಾಗಲೀ ನನ್ನ ತಂದೆಯಾಗಲಿ 3 ಮತ್ತು 4 ಪ್ರತಿವಾದಿಯರಿಗೆ ನೋಟಿಸ್ ಜಾರಿ ಮಾಡಿದ್ದೇವೆಯೇ ಇಲ್ಲವೆ ಎಂದು ಗೊತ್ತಿಲ್ಲ. ನಾನು ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನನ್ನ ತಂದೆ ಪಿಡಬ್ಲ್ಯು-1 ಸಲ್ಲಿಸಿರುವಂತೆಯೇ ಸಲ್ಲಿಸಿದ್ದೇನೆ ಎಂದರೆ ಸರಿ. ಈ ದಾವೆಯ ಮಾಹಿತಿ ನನ್ನ ತಂದೆಗೆ ಗೊತ್ತಿತ್ತು. ನನಗೆ ವಯಕ್ತಿಕವಾಗಿ ಈ ದಾವೆಯ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ ಅಲ್ಲ. 1 ನೇ ಪ್ರತಿವಾದಿಯ ಪರ ವಕೀಲರು ಮಾಹಿತಿ ಕೊಟ್ಟಂತೆ ಅವರು ನನ್ನನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ಹೇಳಿದ್ದೇನೆ ಎಂದರೆ ಸರಿ ಅಲ್ಲ. 1 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಎಲ್ಲ ಪ್ರಶ್ನೆಗೆ ನಿಜ ಎಂದು ಉತ್ತರಿಸಿದ್ದೇನೆ ಎಂದರೆ ಸರಿ. ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಪರಿಚಯಸ್ಥರು ಹಾಗೂ ಸ್ನೇಹಿತರು ಎಂದರೆ ಸರಿ ಅಲ್ಲ. ಮನೆ ಸಂಖ್ಯೆ 430/1 ರ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ಮನೆ ಅರಳೇಶ್ವರದಲ್ಲಿ ಇದೆ. ನಾನು 1 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಹೇಳಿದ ಸಂಪೂರ್ಣ ವಿಷಯಗಳು ಸುಳ್ಳು ಎಂದರೆ ಸರಿ ಅಲ್ಲ. ನನ್ನ ತಂದೆ ಮತ್ತು 1 ಮತ್ತು 2 ನೇ ಪ್ರತಿವಾದಿಯರು ಹಾನಗಲ್ಲ ಸಿವಿಲ್ ಜಡ್ಜ ನ್ಯಾಯಾಲಯದಲ್ಲಿ ಇದ್ದ ಅಸಲು ದಾವೆ ಸಂಖ್ಯೆ

161/2014 ರಲ್ಲಿ ಪ್ರತಿವಾದಿ ಸಂಖ್ಯೆ 1 ಮತ್ತು 2 ಆಗಿದ್ದರು ಎಂದರೆ ಸರಿ. ಸದರಿ ದಾವೆ ಇನ್ನು ಚಾಲ್ತಿಯಲ್ಲಿ ಇದೆ ಎಂದರೆ ಸರಿ.

ನನ್ನ ತಂದೆ ನಿಪಿ–11 ರ ದಾಖಲೆ ಬರೆದುಕೊಟ್ಟಿದಾರೆ ಎಂದು ಈ ದಾವೆ ಹಾಕಲಾಗಿದೆ ಎಂದರೆ ಸರಿ. ನಿಪಿ–11 ರ ಪತ್ರದ ಬಗ್ಗೆ ನನಗೆ ವಯಕ್ತಿಕ ಮಾಹಿತಿ ಇಲ್ಲ ಎಂದರೆ ಇದೆ. ನಿಪಿ–11 ರಲ್ಲಿ ನನ್ನ ಸಹಿ ಇಲ್ಲ. ನಿಪಿ–11 ನ್ನು ಯಾವಾಗ ಮಾಡಲಾಗಿದೆ ಎಂದು ನನಗೆ ಮಾಹಿತಿ ಇದೆ. ಸದರಿ ದಾಖಲೆಯನ್ನು ದಿನಾಂಕಃ19–09–2008 ರಂದು ಮಾಡಲಾಗಿದೆ. ನಿಪಿ–11 ನ್ನು ಜಮೀನು ಉಂಡು ಬಿಡುವ ಕರಾರಿನ ಪ್ರಕಾರ ಮಾಡಿ ಕೊಡಲಾಗಿದೆ ಎಂದರೆ ಸರಿ ಅಲ್ಲ. ನಿಪಿ–11 ರಲ್ಲಿ ಕೈಗಾಡ ಹಣ ರೂ. 1,80,000/– ಬರೆದಿರುವ ಸುಳ್ಳು ಎಂದರೆ ಸರಿ ಅಲ್ಲ. ನಿಪಿ–11 ನ್ನು ನೊಂದಾಯಿಸಿಕೊಳ್ಳಲು ನಮಗೆ ಸಮಸ್ಯೆ ಇರಲಿಲ್ಲ. ಯಾವುದೇ ವ್ಯವಹಾರ ರೂ. 100/–ಕ್ಕೂ ಮೇಲ್ಪಟ್ಟು ಮಾಡಿದರೆ ದಾಖಲೆ ನೊಂದಾಯಿಸಬೇಕು ಎಂದರೆ ಗೊತ್ತಿಲ್ಲ. ನಿಪಿ–11 ರಲ್ಲಿ ಕಾಣಿಸಿದ ರೂ. 1,80,000/– ಹಣವನ್ನು ಯಾರು ಎಲ್ಲಿ ಕೊಟ್ಟರೂ ಎಂದು ಮಾಹಿತಿ ಇದೆ. ರೂ. 1,80,000/– ಹಾನಗಲ್ಲನಲ್ಲಿ ಪಿಡಬ್ಲ್ಯು–3 ರವರ ಕಚೇರಿಯಲ್ಲಿ ಕೊಟ್ಟರು. ಎಲ್ಲ ನೋಟುಗಳು ರೂ. 1000 ಮುಖಬೆಲೆಯದ್ದಾಗಿತ್ತು. ರೂ. 2000 ಮತ್ತು ರೂ. 500 ಮುಖ ಬೆಲೆಯ ನೋಟುಗಳು ಇರಲಿಲ್ಲ. ನಾನು ಹಣ ಕೊಟ್ಟಾಗ ಇರಲಿಲ್ಲ ಮತ್ತು ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ ಅಲ್ಲ. ರೂ. 80,000 ಮಾತ್ರ ಕೊಡಲಾಗಿದೆಯೆಂದು ಪಿಡಬ್ಲ್ಯು–3 ರವರು ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದಾರೆ ಎಂದರೆ ರೂ. 1,80,000 ಗಳನ್ನು ಕೊಟ್ಟಿದ್ದೇವೆ. ಅಸಲು ದಾವೆ ಸಂಖ್ಯೆ 161/2014 ರಲ್ಲಿ 4 ನೇ ಸಾಕ್ಷಿದಾರರಾದ ಶಾಂತಪ್ಪ ಉಂಬಣ್ಣನವರ ಕೇವಲ ರೂ. 40,000 ಕೊಟ್ಟಿದ್ದಾರೆ ಎಂದರೆ ನುಡಿದಿದ್ದಾರೆ ಎಂದರೆ ಸರಿ ಅಲ್ಲ. ಸದರಿ ವ್ಯಕ್ತಿಯನ್ನು ಆ ದಾವೆಯಲ್ಲಿ ನಾವೇ ಸಾಕ್ಷಿ ಮಾಡಿದ್ದೇವೆ ಎಂದರೆ ಸರಿ. ಸದರಿ ಸಾಕ್ಷಿಯು ರೂ. 40,000 ವನ್ನು ಮನೆಯಲ್ಲಿ ಕೊಡಲಾಗಿದೆಯೆಂದು ನುಡಿದ್ದಾರೆ ಎಂದರೆ ಸರಿ ಅಲ್ಲ.

ಯಾವುದೇ ರೀತಿಯ ವ್ಯವಹಾರ ಅಗದೇ ಇದ್ದರೂ ಸಹ ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ದಾವೆ ಹಾಕಲಾಗಿದೆ ಎಂದರೆ ಸರಿ ಅಲ್ಲ. ಯಾರೂ ದುಡ್ಡು ಕೊಡದೇ ಇದ್ದರೂ ಸುಳ್ಳು ಪತ್ರ ಮಾಡಿಸಿ ಸುಳ್ಳು ಸಾಕ್ಷಿಯನ್ನು ಹಾಜರು ಪಡಿಸಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. 2 ನೇ ಪ್ರತಿವಾದಿ ಮತ್ತು ಪೋತಿ ಶಾಂತವ್ವ ಸಂಬಂಧಿಕರಾಗಿದ್ದು ಆ ಕಾರಣದಿಂದ ಮೃತ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ ಅಲ್ಲ

: **ಮರುವಿಚಾರಣೆ** : **ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ